ಕಾಲ್ ಕಟ್ಮಾಡ್ತೀಯ? ನಮ್ಮ ಸೈಟಲ್ಲಿ ಶೆಡ್ ಕಟ್ಸಿ, ಜನ ಮಲಗಿಸ್ಕೊಂಡು, ಮೆಟೀರಿಯಲ್ಸ್ ಮಡಕ್ಕೊಂಡು ನಮ್ಮೇಲೇ ಜೋರ್ ಮಾಡ್ತೀಯ? ಇನ್ನು ಇಪ್ಪತ್ನಾಲಕ್ ಗಂಟೆ ಒಳಗೆ ಅದನ್ನೆಲ್ಲ ಎತ್ಸಿದ್ರೆ ಸರಿ, ಇಲ್ಲಾಂದ್ರೆ ನಿಮ್ಮೆಲ್ಲ ಮೆಟೀರಿಯಲ್ಸ್ ನೆಲ ಸಮ... ಓಕೇ?' ಎಂದ ಗೀತಾ ಉತ್ತರಕ್ಕೆ ಕಾಯದೆ ಫೋನ್ ಕಟ್ಮಾಡಿದಳು.

ಮೂರ್ತಿ ಬೆಚ್ಚಿ ಬಿದ್ದ. ಅತ್ತ ಕಡೆ ಸರ್ಕಾರ್ ಕೂಡ ಮೂರ್ಛೆ ಹೋಗಿರಬೇಕು. ಸಾವರಿಸಿಕೊಳ್ಳಲು ಎರಡು ನಿಮಿಷಗಳೇ ಹಿಡಿದವೇನೋ ಎಂಬಂತೆ ಪೂರ್ತಿ ಮೌನ ಆವರಿಸಿತು. ನಂತರ ಗೀತಾಳ ಫೋನ್ ರಿಂಗಣಿಸಿತು. ಸರ್ಕಾರ್ ಈಗ ಅನುನಯಿಸುತ್ತಿದ್ದ.

'ನಮಸ್ಕಾರ ಮೇಡಂ... ಕೋಪ ಮಾಡ್ಕೋಬೇಡಿ. ಹೀಗೆ ಸಡನ್ನಾಗೆ ಹೇಳಿದ್ರೆ ಹೇಗೆ ಮೇಡಂ... ನಾಕು ದಿನ ಟೈಂ ಕೊಡಿ. ನಾನೇ ಎಲ್ಲ ಖಾಲಿ ಮಾಡ್ಸಿಕೊಡ್ತೀನಿ... ಆಗ್ಬುಹುದಾ?'

'ಮೊದಲೇ ನಮ್ಮನ್ನು ಒಂದು ಮಾತ ಕೇಳೋ ಕರ್ಟಸಿ ತೋರ್ಸಿದ್ರೆ ಇದ್ರ ಅಗತ್ಯ ಇರ್ಲಿಲ್ಲ ಸರ್. ನಾಲ್ಕನೇ ದಿನ, ಅಂದ್ರೆ ಶುಕ್ರವಾರ ನಾನೇ ಖುದ್ದಾಗಿ ನೋಡೋಕೆ ಬರ್ತೀನಿ, ಮಾತು ಉಳಿಸ್ಕೊಳಿ' ಎಂದು ಗೀತಾ ಮುಗುಮ್ಮಾಗಿ ಹೇಳಿದಳು.

'ಸರಿ ಬಿಡಿ, ಮೇಡಂ' ಎನ್ನುವಲ್ಲಿಗೆ ಮಾತು ಮುಗಿಯಿತು. ಮೂರ್ತಿಗೆ ಜೀವ ಮರಳಿತು. ಐದಡಿಯ ಹೆಂಡತಿಯಲ್ಲಿರೋ ಗುಂಡಿಗೆ ಆರಡಿಯ ತನಗಿಲ್ಲವಲ್ಲ ಅಂತ ಅವನಿಗೆ ಪೆಚ್ಚಾಯ್ತು. ಆದರೆ, ಅದವನಿಗೆ ತಿಳಿದ ವಿಚಾರವೇ ಆಗಿದ್ದ ಕಾರಣ 'ಸರ್ಯಾಗ್ ಮಾತಾಡ್ದೆ ನೋಡು... ಲೋಫರ್ ನನ್ಮಗ. ಬೇರೆಯವ್ರಿಗೆ ಒಂದು ಚೂರೂ ರಿಸ್ಪೆಕ್ಟ್ ಕೊಡೋದ್ ಕಲ್ತಿಲ್ಲ' ಅಂದ.

'ಸರಿ, ಈಗ ನಿಮ್ ಬಾಯಿಂದ ಕೆಟ್ಟಾತ್ ಬರೋದು ಬೇಡ' ಎಂದು ಎದ್ದ ಗೀತಾಳನ್ನು ಮೂರ್ತಿ ಬಾಯ್ತೆರೆದುಕೊಂಡು ನೋಡುತ್ತಲೆ, ಉಗುಳು ನುಂಗಿದ.

## 4

ತಮ್ಮ ಸೈಟಿನಿಂದ ಜನರನ್ನು ಖಾಲಿ ಮಾಡಿಸಲು ಎಷ್ಟು ಕಷ್ಟವಾಗುತ್ತದೋ ಎಂದು ಹೆದರಿ ಬಂದಿದ್ದ ಮೂರ್ತಿಗೆ ಕೆಲಸ ಇಷ್ಟು ಸಲೀಸಾಗಿ ಒಂದು ಫೋನ್ ಮಾಡುವುದರಲ್ಲಿ ಇತ್ಯರ್ಥವಾದ್ದು ಹಾಯೆನಿಸಿ ಸುಖವಾಗಿ ನಿದ್ರೆ ಬಂದಿತು. ಆದರೆ, ರಾತ್ರಿ ಗೀತಾ ಸರಿಯಾಗಿ ನಿದ್ದೆ ಬರದೆ ಒದ್ದಾಡಿದ್ದನ್ನು ಗಮನಿಸಿದ.

ಮುಂದಿನ ಮೂರು ದಿನಗಳಲ್ಲಿ ಅವರು ಸಿಮೆಂಟ್ ಸ್ಲಾಬಿನಲ್ಲಿ ಕಾಂಪೌಂಡ್ ಹಾಕುವ ಗೌಸ್ ಎಂಬುವನನ್ನು ಹಿಡಿದು ಸೈಟನ್ನು ತೋರಿಸಿ ಪರಿಸ್ಥಿತಿಯನ್ನು ವಿವರಿಸಿದರು. ಹಳೇ ಕಬ್ಬಿಣ ಮಾರುವ ಗುಜರಿಗೆ ಹೋಗಿ ಸೆಕೆಂಡ್ ಹ್ಯಾಂಡ್ ಗೇಟೊಂದನ್ನು ಹುಡುಕಿ ತಂದರು. ಅದಕ್ಕೊಂದಿಷ್ಟು ಪೇಂಟ್ ತಂದು ಹಚ್ಚಿ ಒಣಗಿಸಿದರು. ಶುಕ್ರವಾರ ಸರ್ಕಾರ್ ಕಡೆಯವರು ಸಾಮಗ್ರಿಗಳನ್ನು ತೆರವುಗೊಳಿಸಿದಂತೆಲ್ಲ ಇತ್ತಕಡೆ ತಮ್ಮ ಕೆಲಸ ಶುರುಮಾಡುವಂತೆ ಕೆಲಸಗಾರರನ್ನು ಒಪ್ಪಿಸಿದರು. ಮೂರು ದಿನಗಳಲ್ಲಿ ಕೆಲಸ ಮುಗಿಸಿಕೊಡಬೇಕೆಂದು ತಾಕೀತು ಮಾಡಿದರು. ಹಾಗಿದ್ದಲ್ಲಿ ಅವರು ಭಾನುವಾರ ರಾತ್ರಿ ಊರಿಗೆ ಮರಳಬಹುದಿತ್ತು.

ನಡು ನಡುವೆ ಗೀತಾ ಏನೇನೋ ಗೂಗಲಿಸುತ್ತಿದ್ದಳು. ಅವಳಿಗೆ ತಿಳಿದಿರುವ ಎಂಜಿನಿಯರ್, ಮನೆ ಕಟ್ಟಿಸಿರುವ ಗೆಳತಿಯರಿಗೆ ಫೋನು ಹಚ್ಚಿದ್ದಳು. ಸೈಟಿಗೆ ಬೇಲಿ ಹಾಕಿಸುವ ಮುಂದಿನ ಕೆಲಸ ಸುಸೂತ್ರವಾಗಿ ಆಗುತ್ತದೆ ಎಂದುಕೊಂಡವನು ಮೂರ್ತಿ ಮಾತ್ರ.

## 5

ಗುರುವಾರ ರಾತ್ರಿಯೂ ಸೈಟಿನಲ್ಲಿ ಯಾವ ಬದಲಾವಣೆ ಆಗಿರಲಿಲ್ಲ. ಇರುವುದಕ್ಕಿಂತ ಹೆಚ್ಚು ಸಾಮಾನು ಬಂದು ಬಿದ್ದಿತ್ತು. ಹೆಣ್ಣು ಹೆಂಗಸೊಬ್ಬಳ ಬೈಗುಳಕ್ಕೆ ಹೆದರಿ, ಬಲವಾದ ಸ್ಥಾನದಲ್ಲಿದ್ದ ಅಧಿಕಾರಿಯೊಬ್ಬ ಬುದ್ಧಿ ಕಲಿಯುವುದಿಲ್ಲ ಎಂದು ಅರಿತಿದ್ದ ಗೀತಾಳಿಗೆ ಆಶ್ಚರ್ಯವೇನೂ ಆಗಲಿಲ್ಲ.

ಶುಕ್ರವಾರ ಬೆಳಿಗ್ಗೆ ಗೀತಾ ಸೈಟಿನೆಡೆಗೆ ಹೊರಟಳು. ಮೂರ್ತಿಗೆ ಹೋಗಲು ಹೆದರಿಕೆಯಾದರೂ, ಹೋಗದೆ ಇರಲು ಹೆಂಡತಿಯ ಭಯವಿದ್ದ ಕಾರಣ ತಾನೂ ಹೊರಟ. ಅಲ್ಲಿದ್ದ ಎಲ್ಲ ಸಾಮಾನುಗಳೂ ಹಾಗೇ ಬಿದ್ದಿದ್ದವು. ಶೆಡ್ ಕೂಡ ಹಾಗೇ ಇತ್ತು. ಸುಮ್ಮನೆ ನಾಕು ದಿನ ಕಾಯಿಸಿ 'ಏನ್ಮಾಡ್ತೀರ?' ಎನ್ನುವಂತೆ ಸರ್ಕಾರ್ ಬೇಕಂತಲೇ ಸೆಡ್ಡು ಹೊಡೆದು ಅವಮಾನಿಸಿದ್ದ.

ಮೇಸ್ತ್ರಿ ಎಂದಿನಂತೆ ಅಸಹಾಯಕನಾಗಿ ನಿಂತಿದ್ದ.

'ಮೇಡಂ ಸರ್ಕಾರ್ ಮಗ ಜೂನಿಯರ್ ಸರ್ಕಾರ್ ಈಗ ಬರ್ತೀನಿ ಅಂದಿದ್ದರು, ಆದ್ರೆ ಇನ್ನೂ ಬಂದಿಲ್ಲ' ಅಂದ. ಅವನ ಫೋನ್ ನಂಬರ್ ಕೂಡ ನೀಡಿದ. ಮೂರ್ತಿ ನಿರ್ವಾಹವಿಲ್ಲದೆ ತಾನೇ ಕಾಲ್ ಮಾಡಿದ.